# ತಪ್ಪಿಗೆ ಶಿಕ್ಷೆಯಾದರೆ ಸಾರ್ಥಕ



**ಸ್ವಾತಿ ಉದಯದ 'ಮನಸಾರೆ'ಯ ದೇವಕಿ**

◆ **ನೀವು ಬೆಂಗಳೂರಿಗೆ ಬಂದಿದ್ದು ಹೇಗೆ?**

ಮೂಲ ಹೊನ್ನಾವರ, ನಮ್ಮ ತಂದೆ ಸರ್ಕಾರಿ ಉದ್ಯೋಗಿಯಾಗಿದ್ದರು. ಹಾಗಾಗಿ ಬೆಂಗಳೂರಿಗೆ ಬಂದು ನೆಲೆಸಬೇಕಾಯಿತು. ಶೇಷಾದ್ರಿಪುರಂ ಕಾಲೇಜಿನಲ್ಲಿ 1996ರಲ್ಲಿ ಓದುತ್ತಿದ್ದಾಗ ಟೀವಿಯಲ್ಲಿ ಅಭಿನಯಿಸಲು ಅವಕಾಶ ಸಿಕ್ಕಿತು. ನಮ್ಮ ಕಾಲೇಜಿನಲ್ಲಿ ಕಾರ್ಯನಿರ್ವಹಿಸುತ್ತಿದ್ದ ಕರಿಬಸವಯ್ಯ ಅವರು ಸುನೀಲ್ ಪುರಾಣಿಕರ ಧಾರಾವಾಹಿಗೆ ಆಹ್ವಾನ ನೀಡಿದರು. ನಮ್ಮ ತಂದೆಯನ್ನು ಕೇಳಿ ಎಂದು ನಮ್ಮ ಮನೆ ವಿಳಾಸವನ್ನು ಅವರಿಗೆ ನೀಡಿ ಸುಮ್ಮನಾದೆ. ಮನೆಯಲ್ಲಿ ಆಗ ಫೋನ್ ಇರಲಿಲ್ಲ. ಒಂದು ದಿನ ಸಂಜೆ ಪುರಾಣಿಕ್ ಮತ್ತು ಕರಿಬಸವಯ್ಯ ನಮ್ಮ ಮನೆಗೆ ಬಂದು ತಂದೆಯ ಜೊತೆ ಮಾತನಾಡಿದರು. ಶಿಕ್ಷಣಕ್ಕೆ ತೊಂದರೆಯಾಗದಿದ್ದರೆ ತಮ್ಮ ಅಭ್ಯಂತರವೇನೂ ಇಲ್ಲ ಎಂದು ಹಸಿರು ನಿಶಾನೆಯನ್ನು ತೋರಿಸಿದರು ಅಪ್ಪ. 'ಪೊಲೀಸ್ ಡೇರಿ' ಧಾರಾವಾಹಿಯ ನಾಯಕಿ ಆದೆ. ಅದನ್ನು ಪುರಾಣಿಕ್ ನಿರ್ದೇಶನ ಮಾಡಿದ್ದರು. ಅವರೂ ನಟಿಸಿದ್ದರು. 'ಉಯ್ಯಾಲೆ', 'ಸ್ವೀಕಾರ', 'ಜನನಿ', 'ಸ್ವೀಕಾರ', 'ಪತ್ತೆದಾರಿ ಪ್ರತಿಭಾ', 'ಗೊರುರು ಕಥಾ ಲೋಕ', 'ಡಿಸ್ಕೊ ರಾಗ ಆದಿತಾಳ' ಎಂಬ ಧಾರಾವಾಹಿಗಳಲ್ಲಿ ನಟಿಸಿದೆ. ಅಂದು ಆರಂಭವಾದ ಬಣ್ಣದ ಬದುಕು ಹಾಗೆಯೇ ಸಾಗುತ್ತಿದೆ.

◆ **ವೃತ್ತಿ ಜೀವನ ಹೇಗೆನಿಸುತ್ತಿದೆ?**

ನಮ್ಮ ಕೆಲಸ ನಾವು ಗೌರವಿಸಬೇಕು. ತನ್ಮಯತೆಯಿಂದ ಮಾಡಬೇಕು ಎಂದು ಹೇಳುತ್ತಾರೆ. ನಾನು ನನ್ನ ವೃತ್ತಿಯನ್ನು ಹಾಗೆಯೇ ತೆಗೆದುಕೊಂಡಿದ್ದೇನೆ. ಬದುಕು ಹೀಗೆ ತಿರುವು ಪಡೆಯುತ್ತದೆ ಎಂಬ ನಿರೀಕ್ಷೆಯನ್ನೇ ಮಾಡಿರಲಿಲ್ಲ. ನನಗೆ ಹೊಸ ಕ್ಷೇತ್ರವೊಂದರಲ್ಲಿ ಅವಕಾಶ ಸಿಕ್ಕಿತು ಅದನ್ನು ಮುಂದುವರಿಸಿದೆ. ಈಗಲೂ ಗುರುತಿಸಿ ಅವಕಾಶವನ್ನು ನೀಡುತ್ತಿದ್ದಾರೆ. ನಾನು ನನ್ನ ಪಾತ್ರಕ್ಕೆ ಎಷ್ಟರಮಟ್ಟಿಗೆ ನ್ಯಾಯವನ್ನು ಕಲ್ಪಿಸಿದ್ದೇನೋ ಗೊತ್ತಿಲ್ಲ. ಆದರೆ ನಾನೂ ಅರ್ಹ ಎಂದು ಪರಿಗಣಿಸಿ ಮಾನ್ಯತೆ ಕೊಡುತ್ತಿದ್ದಾರೆ ಅದಕ್ಕೆ ನಾನು ಋಣಿ.

◆ **ಮನಸಾರೆಯ ದೇವಕಿ ಬಗ್ಗೆ ಹೇಳುವುದಾದರೆ...**

ದೇವಕಿ ಮಲತಾಯಿ. ಆಕೆ ಭೇದ– ಭಾವ ಎಂದು ಎಣಿಸುವುದಿಲ್ಲ. ಲೋಕರೂಢಿಯಲ್ಲಿ ಅಂದುಕೊಳ್ಳುವ ಹಾಗೆ ದೇವಕಿ ಕೆಟ್ಟ ತಾಯಿ ಅಲ್ಲ. ಕಥಾನಾಯಕಿ ಪ್ರಾರ್ಥನಾ ದೊಡ್ಡ ಮಗಳು, ನನ್ನ ಬದುಕಿಗೆ ಬೆಳಕಾಗಿದ್ದಾಳೆ. ಅದನ್ನು ಗೌರವಿಸುತ್ತಾ ಮಲಮಗಳನ್ನು ಪ್ರೀತಿಸುತ್ತೇನೆ. ನನ್ನ ಪತಿ ಮಗಳ ಮೇಲೆ ಕೋಪ ಮಾಡಿಕೊಂಡರೂ ನಾನೇ ಸಮಾಧಾನ ಮಾಡುತ್ತೇನೆ. ಮಗಳೇ ಬಂದು ಏಕಮ್ಮಾ ಅಪ್ಪ ಹೀಗೆ ಮಾಡುತ್ತಾರೆ ಎಂದು ದೂರುತ್ತಾಳೆ. ನನ್ನದು ಪಾಸಿಟಿವ್ ಪಾತ್ರ. ಮಲತಾಯಿ ಎಂದ ಕೂಡಲೇ ದುಷ್ಟರು ಎಂದು ತಪ್ಪು ಭಾವಿಸುತ್ತಾರೆ. ಆಕೆಗೂ ತಾಯಿಯ ಅಂತಃಕರಣ ಇರುತ್ತದೆ. ತಾನು ಹೆತ್ತ ಮಗುವಿನಂತೆಯೇ ಮಲಮಗಳನ್ನು ಪ್ರೀತಿಸುತ್ತಾರೆ. ಬಹುತೇಕ ಸಂದರ್ಭದಲ್ಲಿ ತಾನು ಹೆತ್ತ ಮಗು ಮಲಮಗುವಿಗಿಂತ ಚಿಕ್ಕದಾಗಿರುತ್ತದೆ. ಅದರ ಬಗ್ಗೆ ಕಾಳಜಿ ತೆಗೆದುಕೊಳ್ಳುವುದು ತಾರತಮ್ಯ ಹೇಗಾಗುತ್ತದೆ? ಮಲತಾಯಿ ಎಂದ ತಕ್ಷಣ ಖಳನಾಯಕಿಯಂತೆ ಕಾಣುವ ಮನಃಸ್ಥಿತಿಯನ್ನು ಬದಲಿಸುವಂತೆ ಈ ಪಾತ್ರ ಇದೆ.

◆ **ಒಳ್ಳೆಯ ಪಾತ್ರ ಅಂದರೆ ನಿಮ್ಮ ದೃಷ್ಟಿಯಲ್ಲಿ....**

ಪಾತ್ರ ಎನ್ನುವುದು ಸಮಾಜಮುಖಿಯಾಗಿರಬೇಕು. ಧಾರಾವಾಹಿಗಳು ನಿತ್ಯವೂ ಪ್ರಸಾರವಾಗುತ್ತವೆ. ಮನೆಯಲ್ಲಿ ಕುಳಿತು ನೋಡುವವರು ತಮಗೆ ಅರಿವಿಲ್ಲದಂತೆ ಕಥೆಯೊಳಗೆ ಪ್ರವೇಶ ಮಾಡಿರುತ್ತಾರೆ. ಅವರಿಗೆ ಸಹ್ಯ ಅನ್ನಿಸುವ ಸಂದೇಶವನ್ನು ಕಥೆ ನೀಡಬೇಕು. ಪಾತ್ರಗಳು ವಾಸ್ತವ ಜೀವನಕ್ಕೆ ಮಾದರಿಯಾಗುವಂತೆ ಇರಬೇಕು. ಇಲ್ಲಿ ನಾನು ತಾಯಿ ಪಾತ್ರವನ್ನು ಮಾಡುತ್ತಿದ್ದೇನೆ. 'ಬ್ರಹ್ಮಗಂಟು'ವಿನಲ್ಲಿ ಅತ್ತೆಯ ಪಾತ್ರವನ್ನು ಮಾಡುತ್ತಿದ್ದೆ. ಅಲ್ಲಿ ಸೊಸೆಯನ್ನು ಪ್ರೀತಿಯಿಂದ ನೋಡಿಕೊಳ್ಳುವ ಪಾತ್ರ. ಅದರಲ್ಲಿ ಜೋಗುಳ ಎಂಬ ಒಂದು ಸಿಗ್ಮೆಂಟ್ ಮಾಡಿದ್ದೆವು. ಅದರಲ್ಲಿ 50 ವರ್ಷ ದಾಟಿದ ಮಹಿಳೆಯೊಬ್ಬಳು ಗರ್ಭಧರಿಸುವ ಸನ್ನಿವೇಶ ಬರುತ್ತದೆ. ಆಗ ಅವಳನ್ನು ಸಮಾಜ ಹೇಗೆ ನೋಡುತ್ತದೆ ಎನ್ನುವುದನ್ನು ಬಿತ್ತರಿಸಲಾಯಿತು. ಅನೇಕರು ನನ್ನನ್ನು ಕಂಡಾಗ ನಿಮ್ಮಂತಹ ಅತ್ತೆ ನನಗಿರಬೇಕಿತ್ತು, ನಿಮ್ಮಂತಹ ಅತ್ತೆ ನಾನಾಗಬೇಕು ಎಂದೋ ಅನೇಕರು ಹೇಳಿದ್ದಾರೆ.

◆ **ನೆಗೆಟಿವ್ ಪಾತ್ರಗಳ ಬಗ್ಗೆ ನಿಮಗಿರುವ ನಿಲುವು ಏನು?**

ನೀಚತನವನ್ನು ನಿರೂಪಿಸುತ್ತಾ ಹೋಗುವುದು. ಅದಕ್ಕಾಗಿ ಪಾತ್ರವನ್ನು ಸೃಷ್ಟಿ ಮಾಡಿರುತ್ತಾರೆ. ಅದರ ಅಗತ್ಯ ಎಷ್ಟು ಇರುತ್ತದೆಯೋ ಗೊತ್ತಿಲ್ಲ. ಅಗತ್ಯಕ್ಕೆ ಸೃಷ್ಟಿಸಿದ್ದರೂ ಕೊನೆಗೆ ತಕ್ಕ ಶಿಕ್ಷೆಯನ್ನು ಆ ಪಾತ್ರಕ್ಕೆ ನೀಡಬೇಕು. ಆ ಪಾತ್ರದ ತಪ್ಪಿಗೆ ಪ್ರಾಯಶ್ಚಿತ್ತ ಆಗಲೇಬೇಕು. ಕೊನೆಪಕ್ಷ ಮನೋಪರಿವರ್ತನೆ ಆಗುವಂತಹ ಆಪ್ತಸಮಾಲೋಚನೆಯಾದರೂ ಆಗಬೇಕು. ಸುಮಾರು ಸಂದರ್ಭದಲ್ಲಿ ಅದಾಗುವುದಿಲ್ಲ. ಇದು ತಪ್ಪಿಗೆ ಶಿಕ್ಷೆಯೇ ಇಲ್ಲವೇನೋ ಎನ್ನುವ ಸಂದೇಹದ ಸಂದೇಶ ನೀಡುವುದು ಸಾರ್ಥಕ ಎಂದು ಅನ್ನಿಸುವುದಿಲ್ಲ.

■ **ರಾಘವೇಂದ್ರ ಕೆ.**